**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.1767/2024**

| | | |
|---|---|---|
| ಸಾಕ್ಷಿದಾರರ ಹೆಸರು | : ಶಂಕರ್ ಗುರವ | ಫ್ರಾಸಾ-4 |
| ತಂದೆಯ ಹೆಸರು | : ಬಾಬು | ಚಾಸಾ-4 |
| ವಯಸ್ಸು | : 30 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಅಬಕಾರಿ ಪೇದೆ | ದಿನಾಂಕಃ18.12.2025 |
| ವಾಸಸ್ಥಳ | : ಮೂಡಿಗೆರೆ ಉಪವಿಭಾಗ | |

**:ಮುಖ್ಯ ವಿಚಾರಣೆಃ ಫ್ರಾಜ್ಞ್ಯಾ.ಸ.ಸ.ಅ. ರವರಿಂದ:**

ನಾನು ದಿ.10.10.2019 ರಿಂದ ಮೂಡಿಗೆರೆ ಉಪವಿಭಾಗದ ಅಬಕಾರಿ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿ.09.09.2024 ರಂದು ಚಾಸಾ-11 ರವರ ನಿರ್ದೇಶನದಂತೆ ಪ್ರಕಣದಲ್ಲಿ ವಶಕ್ಕೆ ಪಡೆಯಲಾಗಿದ್ದ ವಾಹನದ ಮಾಲೀಕರಿಗೆ ನೋಟೀಸು ಜಾರಿ ಮಾಡುವ ಸಂಬಂಧ ದಿ.11.09.2024 ರಂದು ಬೆಂಗಳೂರು ನಗರದ ಐಟಿಐ ಲೇಔಟ್, ಕತ್ರಿಗುಪ್ಪೆ ಮುಖ್ಯ ರಸ್ತೆ, ಬನಶಂಕರಿ 2 ನೇ ಹಂತಕ್ಕೆ ತಲುಪಿ. ಅಲ್ಲಿ ಹಾಜರುಸಿಕ್ಕ ಚಾಸಾ-7 ಮತ್ತು 8 ರವರನ್ನು ವಾಹನದ ಬಿ ಎಕ್ಸ್ಟ್ರ್ಯಾಕ್ಟ್ ನಲ್ಲಿ ಕಂಡ ವಿಳಾಸದಲ್ಲಿ ವ್ಯಕ್ತಿಗಾಗಿ ಮಾಲೀಕರನ್ನು ಹುಡುಕಿದಾಗ ಅಲ್ಲಿ ಯಾರು ಪತ್ತೆಯಾಗಿರಲಿಲ್ಲ. ಸ್ಥಳೀಯರನ್ನು ವಿಚಾರಿಸಿದಾಗ ಸದರಿ ಆಸಾಮಿ ವಿಳಾಸದಲ್ಲಿ ಇಲ್ಲ ಹಾಗೂ ಈ ಮುಂದೆ ಸಿಗುವುದು ಕಷ್ಟಸಾಧ್ಯವಾಗಿದೆ ಎಂದು ತಿಳಿಸಿದ ಕಾರಣ ಸದರಿ ಸ್ಥಳದಲ್ಲಿ ಮಹಜರ್ ಬರೆದುಕೊಂಡು, ದಿ.12.09.2024 ರಂದು ಚಾಸಾ-11 ರವರ ಸಮಕ್ಷಮ ವರದಿ ನೀಡಿರುತ್ತೇನೆ.

ಸಾಕ್ಷಿಯು ನಿಪಿ-10 ರ ಜ್ಞಾಪನ, ನಿಪಿ-11 ರ ಮಹಜರ್ ಮತ್ತು ನಿಪಿ-12 ರ ವರದಿಯಲ್ಲಿ ತಮ್ಮ ಸಹಿಗಳನ್ನು ಗುರುತಿಸಿದ್ದು, ಸಾಕ್ಷಿಯ ಸಹಿಗಳನ್ನು ನಿಪಿ-10(ಬಿ), 11(ಎ) ಮತ್ತು 12(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃಆರೋಪಿ ಪರ ಶ್ರೀ ಡಿ.ಕೆ.ಪಿ. ವಕೀಲರಿಂದಃ**

ನಿಪಿ-10 ರ ಜ್ಞಾಪನದಂತೆ ನಾನು ಬೆಂಗಳೂರಿನ ವಿಳಾಸಕ್ಕೆ ಹೋಗಿದ್ದೆ ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಅಲ್ಲಿ ವಾಹನದ ಮಾಲೀಕರನ್ನು ಹುಡುಕಾಡಿ ಅವರು ಸಿಗದಿದ್ದಾಗ ಚಾಸಾ-7 ಮತ್ತು 8 ರವರ ಸಮಕ್ಷಮ ನಿಪಿ-11 ರಂತೆ ಮಹಜರ್ ಕ್ರಮ ಜರುಗಿಸಿದ್ದೇನೆ ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನಿಪಿ-11 ನ್ನು ಪ್ರಕರಣಕ್ಕೆ ಉಪಯೋಗವಾಗುಂವತೆ ಸೃಷ್ಟಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ನಿಪಿ-12 ರಂತೆ ಸುಳ್ಳು ವರದಿ ತಯಾರಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.